


**ಕುತೂಹಲಕರ**

'ನ್ಯಾನೋ ಎಂಬ ನಿಗೂಢ ಜಗತ್ತು!', ಎಸ್.ರವಿಪ್ರಕಾಶ್ ಅವರ ಮುಖಪುಟ ಲೇಖನ (ಸುಧಾ, ಜ. 18) ಮಾಹಿತಿಪೂರ್ಣವಾಗಿದೆ. ನ್ಯಾನೋ ತಂತ್ರಜ್ಞಾನದಿಂದ ಹೊರಹೊಮ್ಮುತ್ತಿರುವ ವೈಜ್ಞಾನಿಕ ಸಂಶೋಧನೆಗಳು ನಿಜಕ್ಕೂ ಊಹೆಗೆ ನಿಲುಕದಂತಿದೆ. ಆದರೂ ಇದು ನಿಜ ಎಂಬುದು ಲೇಖನ ಓದಿದ ಬಳಿಕ ತಿಳಿಯಿತು. ವಿಜ್ಞಾನಿಗಳ ಪರಿಕಲ್ಪನೆಯೂ ಕುತೂಹಲಕರವಾಗಿದೆ. ಆದರೆ ಈ ರೀತಿಯ ತಂತ್ರಜ್ಞಾನ ಜನಸಾಮಾನ್ಯರ ಕೈಗೆಟಕುವುದೇ?

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು,
ಕೆ.ಪಿ.ರಾಮಗುಂಡಿ ಬೈಲಹೊಂಗಲ,
ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

**ವಿಚಾರ ಲಹರಿ**

'ವಿಚಾರ ಲಹರಿ'ಯಲ್ಲಿ 'ವಲಸೆ ಕಾರಣ' (ಶಿಕಾಕು) ಬರಹ ಮೆಚ್ಚುಗೆಯಾಯಿತು. ಜೀವಸಂಕುಲದಲ್ಲಿ ವಲಸೆಯ ಮಹತ್ವ ಮತ್ತು ಅನಿವಾರ್ಯತೆಯನ್ನು ಲೇಖಕರು ಸುಂದರವಾಗಿ ವರ್ಣಿಸಿದ್ದಾರೆ. ಹಾಗೆಯೇ ವಲಸೆ ಬಂದವರನ್ನು ಪ್ರೀತಿಯಿಂದ ಬರಮಾಡಿಕೊಳ್ಳುವುದು ಎಷ್ಟು ಮುಖ್ಯವೋ, ವಲಸೆ ಬಂದವರು ಬಂದಿರುವ ಜಾಗದ ಸಂಸ್ಕೃತಿ, ಆಚಾರಗಳಿಗೆ ಹೊಂದಿಕೊಂಡು ಬದುಕುವುದೂ ಅಷ್ಟೇ ಮುಖ್ಯವೆಂದು ಹೇಳುತ್ತಾ ಸೌಹಾರ್ದ ಬದುಕಿಗೆ ಸಂದೇಶ ನೀಡಿದ್ದಾರೆ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ,
ಎಚ್.ಆನಂದಕುಮಾರ್ ಚಿತ್ರದುರ್ಗ

**ಹೊಸ ಬಗೆಯ ತೇಪೆ ಹಚ್ಚಿದಂತೆ..**

'ವಲಸೆ ಕಾರಣ' ಬರಹ ಅಲ್ಲಲ್ಲಿ ವಲಸೆ ಹೋಗುವ ಬಗ್ಗೆಯೇ ಇದ್ದರೂ, ಈಗಾಗಲೇ ಮಾಹಿತಿ ತಾಣಗಳಲ್ಲಿ ದೊರೆಯುವ ವಿಷಯಕ್ಕೆ ಮತ್ತೊಮ್ಮೆ ಹೊಸ ಬಗೆಯ ತೇಪೆ ಹಚ್ಚಿದಂತೆ ಕಾಣುತ್ತದೆ!

—ಶಂಕರೇಗೌಡ ತುಂಬಕೆರೆ, ಮಂಡ್ಯ

**ಮನಮುಟ್ಟುವಂತಿದೆ**

'ನಿಮ್ಮೊಡನೆ'ಯಲ್ಲಿ 'ಅನಾಥಾಲಯಗಳಲ್ಲೂ ಅಕ್ರಮ' (ಸುಧಾ ಹೆಗಡೆ) ಮನಮುಟ್ಟುವಂತಿದೆ. 'ಹಣವೇ ಎಲ್ಲಕ್ಕಿಂತಲೂ ಮುಖ್ಯ' ಎಂಬ ಧೋರಣೆಯೇ ಇಂದು ಅನುಕಂಪ, ಕರುಣೆ, ಕರ್ತವ್ಯ ಎಲ್ಲವೂ ಕೇವಲ ಪದಗಳಾಗಿ ಪುಸ್ತಕಗಳಲ್ಲಿ, ಶಬ್ದಕೋಶದಲ್ಲಿ ಅಡಗಿ ಹೋಗಿವೆ. ಅನಾಥಾಲಯದಲ್ಲೂ ಇದೇ ಮೂಲಮಂತ್ರವಾಗಿರುವುದು ನಿಜವಾಗಿ ವಿಷಾದನೀಯ.

—ಶ್ರೀನಾಥ್ ಕೊನೇಟಿ ಬೆಂಗಳೂರು

**ಎಳೆಯರ ಕಥೆಗಳು**

'ಎಳೆಯರ ಅಂಗಳ'ದ 'ತಾಯಿಗೆ ತಕ್ಕ ಮಗ' ಹಾಗೂ 'ಕರುಣೆ ಬೀರಿದ ಪ್ರಭಾವ' ಕಥೆಗಳು ಅರ್ಥಪೂರ್ಣವಾಗಿದ್ದವು. ಚಂದ್ರೇಗೌಡರ 'ಪಣ' ಕವನ ಚೆನ್ನಾಗಿತ್ತು.

—ವಸುಮತಿ, ಬಿ.ಎಸ್. ಶಿಪಟೂರು

**ಪಕ್ಷಿ ಲೇಖನ ಅಚ್ಚರಿ**

'ತೋಳನಕೆರೆಯಲ್ಲಿ ಕಾಮನ್‌ಟರ್ನ್' (ಮಂಜುನಾಥ ಆರ್.ಗೌಡರ) ಚಿತ್ರ ಲೇಖನ ಚೆನ್ನಾಗಿದೆ. ಅತ್ಯಂತ ದೂರ ವಲಸೆ ಹೋಗುವ ಪಕ್ಷಿ ಹುಬ್ಬಳ್ಳಿಯಲ್ಲಿ ಪ್ರತ್ಯಕ್ಷವಾಗಿತ್ತು ಎಂಬುದನ್ನು ತಿಳಿದು ಅಚ್ಚರಿ ಆಯಿತು.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ

**ಸಮುದ್ರ ವಿಮಾನಗಳ ಹೊಸಲೋಕ**

'ಸೀ ಪ್ಲೇನ್' (ರಾಜೇಶ್ವರಿ ಜಯಕೃಷ್ಣ) ತೇಲುವ, ಹಾರುವ ವಿಮಾನ ಲೇಖನ ರೋಮಾಂಚನವಾಗುವಂತಿದೆ. ಸಮುದ್ರದಲ್ಲಿ ಸಂಚರಿಸುವ ವಿಮಾನಗಳು ಸಾರಿಗೆ ಸಂಚಾರದಲ್ಲಿ ಹೊಸ 'ಶಕೆ' ಪ್ರಾರಂಭಿಸುವುದರಲ್ಲಿ ಸಂದೇಹ ಇಲ್ಲ. ಈ ಸಮುದ್ರ ವಿಮಾನಗಳ ಹಾರಾಟ ಬೇಗನೆ ಆರಂಭವಾಗಲಿ! 'ಹೊಸ ಲೋಕ' ಬೇಗ ತೆರೆದುಕೊಳ್ಳಲಿ!

—ನಾರಾಯಣ ಯಾಜಿ, ಶಿರಾಲಿ

**ತಾಯಂದಿರಿಗೆ ಉಪಯುಕ್ತ**

ಆರೋಗ್ಯ ಲೇಖನ 'ಕಂದನಿಗೆ ಯಾವ ಲಸಿಕೆ ಕೊಡಿಸಲಿ?'(ಡಾ. ಎಂ.ಡಿ. ಸೂರ್ಯಕಾಂತ) ತಾಯಂದಿರಿಗೆ ಬಹಳ ಉಪಯುಕ್ತವಾಗಿದೆ. ಅನಿವಾರ್ಯ ಕಾರಣಗಳಿಂದ ಅನುಭವಿಗಳೂ ಹಾಗೂ ಪೋಷಕರಿಂದ ದೂರವಿರುವ ದಂಪತಿಗಳೇ ಹೆಚ್ಚಿರುವ ಈ ಕಾಲದಲ್ಲಿ ಲೇಖನ ಸಕಾಲಿಕ.

— ಪತ್ತಂಗಿ ಎಸ್. ಮುರಳಿ, ಬೆಂಗಳೂರು

**ಸಬರಮತಿ ಆಶ್ರಮ**

ಪ್ರವಾಸ ಲೇಖನ 'ಸಬರಮತಿಯ ಸಂತನ ಆಶ್ರಮದಲ್ಲಿ' (ಕೆ.ಆರ್. ಉಮಾದೇವಿ ಉರಾಳ್) ಖುಷಿ ತಂದಿತು. ಉನ್ನತ ಧ್ಯೇಯ, ಸರಳತೆಯ ಗಾಂಧೀಜಿಯವರ ಸಾಧನೆಗಳ ಮೆಲುಕು ಹಾಕಲು ಆಶ್ರಮ ಸೂಕ್ತ ಸ್ಥಳವಾಗಿದೆ. ಚಿತ್ರಗಳು ಕಣ್ಮನ ಸೆಳೆದವು.

—ರವೀಂದ್ರನಾಥ.ಶಿ. ಯಡಹಳ್ಳಿ ಬೀಳಗಿ,
ಗಾಣಧಾಳು ರಾಮಣ್ಣ ಚಿತ್ರದುರ್ಗ, ಲಲಿತಾ
ಅಂಬಾಗಿಲು ಉಪ್ಪುಂದ, ಮೀನಾಕ್ಷಿ ಕೆ.
ರಾಮಗುಂಡಿ ಬೈಲಹೊಂಗಲ, ಕೊಹಿಮ
ಬಸರಕೋಡು, ಸುಂದರ್, ಬೆಂಗಳೂರು

**ಸಂಗೀತ ವಿದ್ಯಾನಿಧಿ**

'ಸಂಗೀತ ವಿದ್ಯಾನಿಧಿ ಇನ್ನು ನೆನಪು' (ಉಮಾ ಅನಂತ್) ಪಿಟೀಲು ವಿದ್ವಾಂಸ ಮೈಸೂರು ಮಹದೇವಪ್ಪ ಅವರ ಸಂಗೀತಯಾನ ನಿಜಕ್ಕೂ ಅಭಿನಂದನೀಯ.

—ಪಿ.ಜಯವಂತ ಪೈ ಕುಂದಾಪುರ

**ದಂಡಿಯಾತ್ರೆ ದಿನಾಂಕ**

ಲೇಖನದಲ್ಲಿ ಗಾಂಧೀಜಿಯವರು 17–6–1917ರಲ್ಲಿ ದಂಡಿಯಾತ್ರೆ ಆರಂಭಿಸುವವರೆಗೂ ಎಂದಿದೆ. ಆದರೆ ದಂಡಿಯಾತ್ರೆ ಆರಂಭವಾದದ್ದು 12–3–1930ರಲ್ಲಿ.

—ಗುಬ್ಬಿ ರೇವಣಾರಾಧ್ಯ, ಬೆಂಗಳೂರು

**ತಪ್ಪಾಗಿ ಪ್ರಕಟವಾಗಿದೆ**

'ಸೆಲೆಬ್ರಿಟಿ' ಅಂಕಣದಲ್ಲಿ 'ಪ್ರತಿಭೆಯ ಖಣಿ ಬನ್ನಾಲಿ' (ಹನಿ) ಬರಹದಲ್ಲಿ ಬನ್ನಾಲಿ ನಿರ್ದೇಶಿಸಿದ ಚಿತ್ರದ ಹೆಸರು 'ರಾಮಲೀಲಾ' ಎಂದಾಗಬೇಕು. ಅದು 'ರಾಸ್‌ಲೀಲಾ' ಎಂದು ತಪ್ಪಾಗಿ ಪ್ರಕಟವಾಗಿದೆ.

—ಮುಕುಂದ ಹೆರಕಲ್ಲ, ಕಲಬುರ್ಗಿ




